ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ. 4762/2023

ಸಿ.ಡಬ್ಲ್ಯೂ -03
ಪಿ.ಡಬ್ಲ್ಯೂ -03

**ಸಾಕ್ಷಿಗೆ ದಿಃ 01.04.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ.ವಾಯ್.ಆರ್.ಹೆಚ್ ವಕೀಲರಿಂದಃ**

ನನ್ನ ಕೆಲಸದ ಅವದಿ ಸಾಮಾನ್ಯವಾಗಿ ಬೆಳಿಗ್ಗೆ 10 ರಿಂದ 5.30 ರಿಂದ 6 ಗಂಟೆ ಆಗಿರುತ್ತದೆ. ಕೆಲಸಕ್ಕೆ  ಹಾಜರಾದ ತಕ್ಷಣ ಡೈರಿಯಲ್ಲಿ ನಮೂದು ಮಾಡುವ ಅಗತ್ಯ ಇರುತ್ತದೆ. ಬೇರೆ ಕಡೆ ಡೆಪ್ಯೂಟ್ ಮಾಡಿದಲ್ಲಿ ಚಲನ ವಲನ ಪುಸ್ತಕದಲ್ಲಿ ನಮೂದು ಮಾಡುತ್ತೇವೆ. ನಮಗೆ ಯಾವುದೇ ವಾಹನ ನೀಡಿರುವುದಿಲ್ಲ ಎಲ್ಲಿಯಾದರೂ ಹೋಗಬೇಕಾದಲ್ಲಿ ಖಾಸಗಿ ವಾಹನದಲ್ಲಿ ಹೋಗುತ್ತೇವೆ.  ದಿಃ 16.07.2021 ರಂದು ನನಗೆ ಕರ್ತವ್ಯ ನಿಯೋಜಿಸಿದ ಬಗ್ಗೆ ಡೈರಿಯಲ್ಲಿ ನಮೂದು ಇರುತ್ತದೆ ಎಂದರೆ  ಸರಿಯಲ್ಲ. ಟಿಂ ವರ್ಕ್ ಆದಲ್ಲಿ ಪ್ರತ್ಯಕವಾಗಿ ನಿಯೋಜನೆ ಮಾಡುತ್ತಾರೆ. ಮುಖ್ಯ ವಿಚಾರಣೆ ಮತ್ತು ನನ್ನ ಹೇಳಿಕೆಯಲ್ಲಿ ಟಿಂ ವರ್ಕ್ ಬಗ್ಗೆ ನಮೂದು ಇರುವುದಿಲ್ಲ.  ನನ್ನ ಹೇಳಿಕೆಯಲ್ಲಿ ಗಸ್ತಿಗೆ ನೇಮಕ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ.

ಇಂತಹ ಸ್ಥಳಕ್ಕೆ ಹೋಗಿ ದಾಳಿ ಮಾಡಬೇಕೆಂದು ನಮಗೆ ನಿಯೋಜನೆ ಮಾಡಿರುವುದಿಲ್ಲ. ಆ ದಿನ ನಿಮಗೆ ಪ್ರತ್ಯಕ್ಷ ವಾಹನ  ವ್ಯವಸ್ಥೆ ಮಾಡಿಕೊಟ್ಟಿಲ್ಲವೆಂದರೆ ಸರಿ. ನನ್ನನ್ನು ಚಾಸಾ 4 ಅವರು 10.25 ಗಂಟೆಗೆ ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತಾರೆ. ನಾನು ಆ ದಿನ ಸ್ಥಳಕ್ಕೆ ದೊಡ್ಡಕೆರೆ ಕೋಡಿ ಮಾರ್ಗವಾಗಿ ಹೋಗಿರುತ್ತೇನೆ. ಗಂಗೋನಹಳ್ಳಿ ರಸ್ತೆ ಇರುವ ವಿಚಾರ ನನಗೆ ಗೊತ್ತು.

ಕೋವಿಡ್ ಇದ್ದ ಕಾರಣ ಕುಣಿಗಲ್ ಒಳಗೆ ಮತ್ತು ಕೋಡಿ ಮದ್ಯದಲ್ಲಿ ದೊಡ್ಡಕೆರೆ ಮದ್ಯದಲ್ಲಿ ವಾಹನ ನಿರ್ಬಂದಿಸುವ ಕುರಿತು ಚೆಕ್ ಪೋಸ್ಟ ಇತ್ತು ಎಂದರೆ ಸರಿಯಲ್ಲ.

ಕೋವಿಡ್ ಸಮಯದಲ್ಲಿ ಮದ್ಯ ಮಾರಾಟ ಸ್ವಲ್ಪ ದಿನ ಸಂಪೂರ್ಣವಾಗಿ ಬಂದ್ ಆಗಿತ್ತು ಎಂದರೆ  ಸಾಕ್ಷಿ ಸ್ವಲ್ಪ ಇತ್ತು ಎಂದು ಹೇಳುತ್ತಾರೆ. ಕುಣಿಗಲ್ ವಲಯ ಕಚೇರಿಯಲ್ಲಿ ಕೆಲಸ ಮಾಡುವ ಕಾರಣ ಯಾವ ಯಾವ ಮದ್ಯದ ಅಂಗಡಿಗಳಿಗೆ  ಯಾವ ಯಾವ ನಂಬರಿನ ಮದ್ಯ ಸರಬರಾಜು ಆಗುತ್ತದೆಂದು ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಇರುವ ಮು. ಮಾ. ಯಾವ ಅಂಗಡಿಗೆ ಸೇರಿದ್ದು ಇರುತ್ತದೆಂದು ನನಗೆ ಗೊತ್ತಿರುವುದಿಲ್ಲ.

ಅಂಬೇಡ್ಕರ ಭವನ ಗಂಗೋಣಹಳ್ಳಿ ಕಡೆಯಿಂದ ರಸ್ತೆಗೆ ಹೊಂದಿಕೊಂಡು ಇರುತ್ತದೆ ಕೋಡಿ ರಸ್ತೆಗೆ ಹೊಂದಿಕೊಂಡು ಇರುವುದಿಲ್ಲವೆಂದರೆ ಸರಿ. ಅಂಬೆಡ್ಕರ ಭವನದ ಮುಂದೆ ಇರುವ ರಸ್ತೆಯಲ್ಲಿ ನನ್ನ ಪ್ರಕಾರ ಈ ಘಟನೆ ನಡೆದಿರುತ್ತದೆ. ಸದರಿ ರಸ್ತೆ ಪೂರ್ವ ಪಶ್ಚಿಮ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಅಂಬೇಡ್ಕರ ಭವನಕ್ಕೆ ಹೊಂದಿಕೊಂಡಂತೆ ಪಶ್ಚಿಮ ಮತ್ತು ಉತ್ತರಕ್ಕೆ ಮನೆಗಳು ಇರುತ್ತವೆ ಎಂದರೆ ಸರಿ. ಅಂಬೇಡ್ಕರ ಭವನದ ರಸ್ತೆಯಿಂದ ಕೆರೆ ಕೋಡಿ ರಸ್ತೆ 100 ರಿಂದ 150 ಮೀಟರ ಅಂತರ ಇದೆ. ಕೆರೆಕೊಡಿ ರಸ್ತೆಯಲ್ಲಿ ದಾಳಿ ಮಾಡಿಲ್ಲವೆಂದರೆ ಸರಿಯಲ್ಲ. ನನ್ನ ಪ್ರಕಾರ ದ್ವಿ ಚಕ್ರ ವಾಹನ ಸರ್ವಿಸ್ಸ ರಸ್ತೆಯಲ್ಲಿ ಬಂದಿರುತ್ತದೆ. ಸರ್ವಿಸ್ ಯಿಂದ ರಾಯಗೋನಹಳ್ಳಿಗೆ ಹೋಗಬೇಕಾದಲ್ಲಿ ಅಂಬೇಡ್ಕರ ಭವನದ ರಸ್ತೆಗೆ ಹೋಗಬೇಕಾದ ಅವಶ್ಯಕತೆ ಇರುವುದಿಲ್ಲವೆಂದರೆ ಸರಿ.

ಸಾಮಾನ್ಯವಾಗಿ ಮೊದಲು ಚೀಲದಲ್ಲಿ ಇರುವುದನ್ನು ಪರಿಶೀಲನೆ ಮಾಡಿ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಅದೇ ಕ್ರಮವನ್ನು ಅನುಸರಿಸಿರುತ್ತೇವೆ. ನನ್ನ ಪ್ರಕಾರ ಸದರಿ ದ್ವಿ ಚಕ್ರವಾಹನದಲ್ಲಿ ಒಬ್ಬರೆ ವ್ಯಕ್ತಿ ಇದ್ದರು ಎಂದು ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿ ಭದ್ರತೆಗಾಗಿ ಪೋಟೋಗಳನ್ನು ತಗೆಯುತ್ತೇವೆ ಎಂದರೆ ಸರಿ.

ಈ ಪ್ರಕರಣದಲ್ಲಿ ಪೋಟೋಗಳನ್ನು ತಗೆದಿರುವುದಿಲ್ಲ. ಈ ಪ್ರಕರಣದಲ್ಲಿ ಇಂತಹ ವ್ಯಕ್ತಿ ಸಾಗಾಟ ಮಾಡುತ್ತಿದ್ದಾರೆಂದು ನನಗೆ ಮಾಹಿತಿ ಬಂದಿರುವುದಿಲ್ಲ ನಮ್ಮ ಅಧಿಕಾರಿಗೆ

ಬಂದಿರುತ್ತದೆಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಇರುವ ಆಸಾಮಿಯ ತಂದೆಯ ಹೆಸರು ಮತ್ತು ಪೂರ್ಣ ವಿಳಾಸ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಗೆ ಸೇರಿದ ಅಂಗಡಿಗಳು ಇವೆಯಾ ಎಂದು ಮತ್ತು ಆತನು ಏನು ಕೆಲಸ ಮಾಡುತ್ತಿದ್ದಾನೆಂದು ನನಗೆ ಗೊತ್ತಿರುವುದಿಲ್ಲ. ನಮ್ಮ ದಾಖಲೆಗಳ ಪ್ರಕಾರ ದ್ವಿ ಚಕ್ರ ವಾಹನ ಆರೋಪಿಗೆ ಸೇರಿಲ್ಲವೆಂದರೆ ಸರಿ. ಆರೋಪಿಗೆ ಸೈಕಲ್ ಮತ್ತು ದ್ವಿ ಚಕ್ರವಾಹನ ಓಡಿಸಲು ಬರುವುದಿಲ್ಲ ಸದರಿ ಆತನಿಗೆ ಸೇರಿರುವುದಿಲ್ಲ ಆತ ವ್ಯವಸಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಮೂಲ ಕಸಬು ವ್ಯವಸಾಯ ಎಂದರೆ ಸರಿ.

ನಾವು ಆ ದಿನ ದಾಳಿಗೆ ಸಮವಸ್ತ್ರದಲ್ಲಿ ಹೋಗಿರುತ್ತೇವೆ. ನಾನು ಹೇಳುವ ದಿನಾಂಕದಂದು ಸಂಪೂರ್ಣ ಕರ್ಫ್ಯೂ ಇರಲಿಲ್ಲ ಜನರ ಓಡಾಟ ಇತ್ತು ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳ ಕಡೆ ಪೋಲಿಸರು ಹೋದಾಗ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿ. ಅಂಬೇಡ್ಕರ ಭವನದ ಮುಂದೆ ನಮ್ಮನ್ನು ಸಮವಸ್ತ್ರದಲ್ಲಿ ಕೊತ್ತಿಗೆರೆಯಿಂದ ಮತ್ತು ಅಂಬೇಡ್ಕರ ಭವನದ ಹತ್ತಿರ ಮನೆಗಳಿಂದ ನಮಗೆ ನೋಡಿದರೆ ಕಾಣುತ್ತದೆ ಎಂದರೆ ಸರಿ. ಆ ದಿನ ಮನೆಗಳು ತೆರೆದಿದ್ದವು ಮತ್ತು ಅಂಬೇಡ್ಕರ ಭವನದ ಮುಂಬಾಗ ಜನ ಸಂಚಾರ ಇತ್ತು. ನಮ್ಮ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಬರೆಯಲು ಬರುತ್ತದೆ.

ನಮ್ಮ ಪ್ರಕಾರ ನಮ್ಮ ಇಲಾಖಾ ವಾಹನ ಅಂಬೇಡ್ಕರ ಭವನದ ಪಕ್ಕದಲ್ಲಿತ್ತು. ನಾು ಎಸ್.ಹೆಚ್ 33 ರಸ್ತೆಯಿಂದ ಬಂದಿರುತ್ತೇವೆ. ನಮ ವಾಹನದಿಂದ ಕರೆಕೋಡಿ ರಸ್ತೆಯಿಂದ 50 – 100 ಮೀಟರ ಅಂತರದಲ್ಲಿತ್ತು ಎಂದು ಹೇಳುತ್ತಾರೆ. ಪಂಚನಾಮೆಯನ್ನು ಕೈಯಲ್ಲಿ ಬರೆಯಲು ಯಾವುದೇ ತೊಂದರೆ ಇರಲಿಲ್ಲವೆಂದರೆ ಸರಿ. ಸದರಿ ಪಂಚನಾಮೆಯನ್ನು ಹೀಗೆಯೇ ಬರೆಯಬೇಕೆಂದು ನಾನು ಮಾಹಿತಿ ನೀಡಿರುವುದಿಲ್ಲ.

ನಮ್ಮ ಇಲಾಖೆಯಲ್ಲಿ ಟೈಪಿಸ್ಟ ಇರುತ್ತಾರೆ. ನನ್ನ ಪ್ರಕಾರ ಚಾಸಾ 4 ಅವರೇ ಟೈಪ್ ಮಾಡಿರುತ್ತಾರೆ. ಟೈಪಿಸ್ಟ ಟೈಪ್ ಮಾಡಿರುವುದಿಲ್ಲ. ಚೀಲವನ್ನು ಮೊದಲ ಬಾರಿಗೆ ಚಾಸಾ 3

ನಾನೇ ತೆರೆದಿರುತ್ತಾರೆ. ಮು. ಮಾ. ಗಳ ಮೇಲೆ ನಾನು ನನ್ನ ವಿಶಿಷ್ಟವಾದ ಸಹಿಯನ್ನು ಮಾಡಿರುವುದಿಲ್ಲ. ರಟ್ಟಿನ ಪೆಟ್ಟಿಗೆಯ ಮೇಲೆ ಏನು ಬರವಣಿಗೆ ಇತ್ತು ಎಂದು ನನಗೆ ಗೊತ್ತಿಲ್ಲ. ರಟ್ಟಿನ ಪೆಟ್ಟಿಗೆಯ ಮೇಲೆ ನನ್ನ ಸಹಿ ಇರುವುದಿಲ್ಲ. ಮು. ಮಾ. ಗಳ ಮೇಲೆ ಚೀಟಿ ಅಂಟಿಸುವುದು ಸೀಲ್ ಹಾಕುವುದು ನಾನು ಮಾಡಿರುವುದಿಲ್ಲ. ಮು. ಮಾ. ಗಳ ಇರುವ ನಂ.ಗಳನ್ನು ಮಹಜರನಲ್ಲಿ ಬರೆದಿರುವುದಿಲ್ಲ. ಆರೋಪಿಗೆ ಸಂಬಂಧಿಸಿದಂತೆ ಈ ಹಿಂದೆ ಮದ್ಯ ಮಾರಾಟದ ಬಗ್ಗೆ ಪ್ರಕರಣದ ದಾಖಲು ಆಗಿರುವುದಿಲ್ಲ. ರಟ್ಟಿನ ಪೆಟ್ಟಿಗೆ ಮತ್ತು ಮು. ಮಾ. ನಮ್ಮ ಇಲಾಖೆಯಲ್ಲಿ ಸಿಗುತ್ತವೆ ಎಂದರೆ ಸಾಕ್ಷಿ ಮು. ಮಾ. ಸಿಗುವುದಿಲ್ಲ ಅಂತಹ ವಸ್ತುಗಳು ಸಿಗುತ್ತವೆಂದು ಹೇಳುತ್ತಾರೆ.

ಮು. ಮಾ. ಗಳು ನಂತರ ಏನು ಮಾಡಿರುತ್ತಾರೆಂದು ನನಗೆ ಗೊತಿಲ್ಲ. ಮು. ಮಾ. ಗಳ ಮೇಲೆ ನನ್ನ ಸಹಿ ಇರದೇ ಇರುವ ಕಾರಣ ಅವುಗಳನ್ನು ಗುರುತಿಸಲು ಆಗುವುದಿಲ್ಲವೆಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ರಾಯಗೊಣಹಳ್ಳಿ ಎಂದು ನಮೂದು ಇರುತ್ತದೆ. ರಾಯಗೊಂಡನಹಳ್ಳಿಗೂ ಮತ್ತು ರಾಯಗೋಣ ಹಳ್ಳಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ರಾಯಗೊಂಡನಹಳ್ಳಿ ಎಂದು ನಾನು ಬರೆಸಿರುವುದಿಲ್ಲ ನಮ್ಮ ಮೇಲಾಧಿಕಾರಿ ಬರೆದಿರುತ್ತಾರೆಂದು ಹೇಳುತ್ತಾರೆ. ಆ ದಿನ ಸಿಕ್ಕ ವ್ಯಕ್ತಿಯ ಗುರುತಿನ ಚೀಟಿಯನ್ನು ಪಡೆದಿರುವುದಿಲ್ಲ.

ರಾಸಾಯನಿಕ ಪರೀಕ್ಷೆ ಮು. ಮಾ. ಎಲ್ಲರು ಸೇರಿ ತಗೆದಿರುತ್ತೇವೆ. ಈ ಬಗ್ಗೆ ಪಂಚನಾಮೆಯಲ್ಲಿ ನಮೂದು ಇರುವುದಿಲ್ಲ. ಆ ದಿನ ಮನೆಗಳಲ್ಲಿದ್ದ ಸ್ಥಳೀಯರನ್ನು ನಮ್ಮ ಮೇಲಾಧಿಕಾರಿ ಪಂಚನಾಮೆಗೆ ಸಹಕರಿಸುವಂತೆ ಕೇಳಿರುವುದಿಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಈ ಪ್ರಕರಣವನ್ನು ಮೇಲಾಧಿಕಾರಿಗಳು ಒತ್ತಡಕ್ಕೆ ಮಣಿದು ಆರೋಪಿತನ ವಿರುದ್ದ ದಾಖಲು ಮಾಡಿದ್ದು ಆ ದಿನ ಆರೋಪಿ ಸ್ಥಳಕ್ಕೆ ಬಂದಿಲ್ಲ ಮತ್ತು ಆತನಿಗೆ ವಾಹನ ಚಲಾಯಿಸಲು ಬರುವುದಿಲ್ಲವೆಂದರೆ

ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ದಾಖಲೆ ನೋಡಿ ಹೇಳುತ್ತಿದ್ದು ನನಗೆ ಯಾವುದೆ ಖುದ್ದು ಮಾಹಿತಿ ಇಲ್ಲವೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ನಿಜವಾಗಿ ಘಟನೆ ನಡೆದಿದ್ದಲ್ಲಿ ಪಂಚನಾಮೆ ಕೈಯಲ್ಲಿ ಬರೆಯುತ್ತಿದ್ದೇವು ನ್ಯಾಯಾಲಯದ ಮುಂದೆ ಇರುವ ಪಂಚನಾಮೆಯನ್ನು ಲ್ಯಾಪ್ ಟಾಪ್ ಉಪಯೋಗಿಸಿ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಬೇಟಿ ನೀಡಿ ದಾಳಿ ಮಾಡಿದ್ದಲ್ಲಿ ಸಾರ್ವಜನಿಕರ ಸಹಿ ಪಡೆಯುತ್ತಿದ್ದೇವು ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಠಿ ಮಾಡಿದ ಕಾರಣ ಸಾರ್ವಜನಿಕರ ಸಹಿ ಪಡೆದಿರುವುದಿಲ್ಲವೆಂದರೆ ಸರಿಯಲ್ಲ. ಮಹಜರ ಮಾಡಿದ ಸ್ಥಳದಲ್ಲಿ ಪೂರ್ವಕ್ಕೆ ಗಂಗೋನಹಳ್ಳಿ ಬರುತ್ತದೆ ಮೈಸೂರು ರಸ್ತೆ ಇರುವುದಿಲ್ಲ. ಪಶ್ಚಿಮಕ್ಕೆ ಖಾಲಿ ಜಾಗ ಬರುತ್ತದೆ ಗಂಗೋನಹಳ್ಳಿ ರಸ್ತೆ ಬರುವುದಿಲ್ಲವೆಂದರೆ ಸರಿಯಲ್ಲ. ಪಶ್ಚಿಮ್ಕೆ ಗದ್ದೆಗೆ ಹೋಗುವ ರಸ್ತೆ ಇರುತ್ತದೆಂದು ಹೇಳುತ್ತಾರೇ.

ನಾವು ಮಹಜರ ಮಾಡಿದ ಸ್ಥಳಕ್ಕೂ ಮೈಸೂರು ರಸ್ತೆಗೂ 100 ಮೀಟರ ಅಂತರ ಇರುತ್ತದೆ ಎಂದರೆ ಸರಿ. ಕುಣಿಗಲ್ ನಿಂದ ಕೆರೆಕೋಡಿ ಮೂಲಕ ರಾಯಗೊಂಡನಹಳ್ಳಿ ಗ್ರಾಮಕ್ಕೆ ಹೋಗುವಾಗ ಗಂಗೋನಹಳ್ಳಿಗೆ ಹೋಗುವ ಅವಶ್ಯಕತೆ ಇರುವುದಿಲ್ಲವೆಂದರೆ ಸರಿ. ಆ ದಿನ ಆರೋಪಿ ಗಂಗೋನಹಳ್ಳಿ ರಸ್ತೆಯ ಮೂಲಕ ಬಂದಿಲ್ಲವೆಂದರೆ ಸರಿ. ಕರ್ಫ್ಯೂ ಇದ್ದ ಕಾರಣ ಕುಣಿಗಲ್ ಗೆ ಹೋಗಿ ಬರುವ ಕಾರಣ ಪೋಲಿಸರು ತಪಾಸಣೆ ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ಆ ದಿನ ಮದ್ಯವನ್ನು ಸಾಗಾಟ ಮಾಡಿದ್ದಲ್ಲಿ ಪೋಲಿಸರು ಚಕ್ಕಪೋಸ್ಟನಲ್ಲಿ ಹಿಡಿಯುತ್ತಿದ್ದರು ಸದರಿ ರಸ್ತೆಯಲ್ಲಿ ಬರುತ್ತಿರಲಿಲ್ಲವೆಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಮು. ಮಾ. ಗೂ ಯಾವುದೇ ಸಂಬಂದ ಇಲ್ಲ ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ತಯಾರು ಮಾಡಿದ ವರದಿಗೆ ನಾನು ಸಹಿ ಮಾಡಿರುತ್ತೇನೆ ಎಂದೆ ಸರಿಯಲ್ಲ. ನಾನೇ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಮು. ಮಾ. ಗಳನ್ನು ಎಫ್.ಎಸ್,ಎಲ್ ಗೆ

ತಗೆದುಕೊಂಡು ಹೋಗಿಲ್ಲ ಮತ್ತು ನನ್ನನ್ನು ನೇಮಕ ಮಾಡಿರುವುದಿಲ್ಲ ನಾನು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಯಿಂದ ನನಗೆ ಯಾವುದೇ ಎಫ್.ಎಸ್. ಎಲ್ ಕುರಿತು ವೈಯಕ್ತಿಕ ಪತ್ರ ಇರುವುದಿಲ್ಲವೆಂದರೆ ಸರಿಯಲ್ಲ. ನನಗೆ ಯಾವುದೇ ಪತ್ರ ನೀಡದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.